<u>**ಕರ್ನಾಟಕ ವಿಧಾನ ಪರಿಷತ್ತು**</u>

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1002 |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 12-03-2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗಾರೆಬಾವಿ ಪಾಳ್ಯ ಕೆರೆ ಸಂಪೂರ್ಣವಾಗಿ ಕಳೆಗಳಿಂದ ಮುಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕೆರೆಯನ್ನು ಉಳಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು; ಈ ಕೆರೆಯ ಮೂಲ ವಿಸ್ತೀರ್ಣವೆಷ್ಟು; ಪ್ರಸ್ತುತ ಎಷ್ಟು ವಿಸ್ತೀರ್ಣದಲ್ಲಿ ಕೆರೆ ಇದೆ; (ಸಮಗ್ರ ವಿವರ ನೀಡುವುದು) | • ಬಂದಿದೆ.<br>• ಮಾನ್ಯ ಸರ್ವೋಚ್ಚ ನ್ಯಾಯಾಲಯದ SLP No.3595-3596/2020 ಪ್ರಕರಣವು ದಿನಾಂಕ: 04-09-2025 ರಂದು ಇತ್ಯರ್ಥವಾಗಿರುವುದರಿಂದ, ಅನುದಾನದ ಲಭ್ಯತೆಯಂತೆ ಕೆರೆಯ ಅಭಿವೃದ್ಧಿ ಮಾಡಲು ಕ್ರಮಕೈಗೊಳ್ಳಲಾಗುತ್ತದೆ.<br>• ಒಟ್ಟು ವಿಸ್ತೀರ್ಣ 17 ಎಕರೆ 30 ಗುಂಟೆ (ನಕ್ಷೆ ಲಗತ್ತಿಸಿದೆ). |
| ಆ) | ಕಳೆದ 3 ವರ್ಷಗಳಲ್ಲಿ ಗಾರೆಬಾವಿ ಪಾಳ್ಯ ಕೆರೆ ಅಭಿವೃದ್ಧಿಗೆ ಸರ್ಕಾರ ಎಷ್ಟು ಮೊತ್ತ ವೆಚ್ಚ ಮಾಡಿದೆ; ಯಾವ ಯಾವ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ; | • ಮಾನ್ಯ ಸರ್ವೋಚ್ಚ ನ್ಯಾಯಾಲಯದ SLP No.3595-3596/2020, ದಿನಾಂಕ: 03-02-2020 ರಲ್ಲಿ ನೀಡಿರುವ ತಡೆಯಾಜ್ಞೆ ಇದ್ದುದ್ದರಿಂದ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ.<br>• ಪ್ರಸ್ತುತ ಕೆರೆ ಸಂಪೂರ್ಣವಾಗಿ ಬತ್ತಿ ಹೋಗದಂತೆ ಅಭಿವೃದ್ಧಿ ಪಡಿಸಲು ಅನುದಾನದ ಲಭ್ಯತೆ ಮೇರೆಗೆ ಕ್ರಮವಹಿಸಲಾಗುತ್ತದೆ.<br>• ಸದರಿ ಕೆರೆಯನ್ನು ಖಾಸಗಿ ಬಿಲ್ಡರ್ ರವರಿಗೆ ಪರಭಾರೆ ಸಂಬಂಧ ಯಾವುದೇ ಅವಕಾಶವಿರುವುದಿಲ್ಲ.<br>• ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |
| ಇ)) | ಗಾರೆಬಾವಿ ಪಾಳ್ಯ ಕೆರೆ ಸಂಪೂರ್ಣವಾಗಿ ಭತ್ತಿ ಹೋಗದಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಸದರಿ ಭತ್ತಿಹೋದ ಕೆರೆಯನ್ನು ಖಾಸಗಿ ಬಿಲ್ಡರ್ ರವರಿಗೆ ಪರಭಾರೆ ಅಥವಾ ಒತ್ತುವರಿಗೆ ಅವಕಾಶ ಕಲ್ಪಿಸಲಾಗಿದೆಯೆ; ಇದಕ್ಕೆ ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ; (ವಿವರ ನೀಡುವುದು) | |

**ನಅಇ 214 ಎಂಎನ್‌ವೈ 2026 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ